**ನಗರಸಭೆ, ಚಿಕ್ಕಮಗಳೂರು**

ಸಂಖ್ಯೆ:ಸಿಎಂಸಿ/ಎ10/ಕಾ.ಶಾ/ಸಿಆರ್/89/2009-10 ದಿನಾಂಕ: 31.12.2009

## ಟೆಂಡರ್ ಪ್ರಕಟಣೆ

ನಗರಸಭಾ ನಿಧಿಯಿಂದ ನಗರಸಭಾ ವ್ಯಾಪ್ತಿಯಲ್ಲಿ ತುರ್ತಾಗಿ ಅವಶ್ಯಕತೆಯಿರುವ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿರುವಂತೆ ಲೋಕೋಪಯೋಗಿ ಇಲಾಖೆಯಿಂದ ಹಾಗೂ ನಗರಸಭೆಯಿಂದ ಪರವಾನಗೆಯನ್ನು ಪಡೆದಿರುವ ನೋಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕರೆಯಲಾಗಿದೆ. ಟೆಂಡರ್‌ನ್ನು ಸಲ್ಲಿಸುವ ಗುತ್ತಿಗೆದಾರರು ಪ್ರತಿಯೊಂದು ಕಾಮಗಾರಿಗಳ ಮುಂದೆ ನಮೂದಿಸಿರುವ ಠೇವಣಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು ರವರ ಹೆಸರಿನಲ್ಲಿ ಡಿ.ಡಿ. ಅಥವಾ ನಗದು ಪಾವತಿಸಿದ ರಶೀದಿ ಪಡೆದು ಟೆಂಡರ್‌ನೊಂದಿಗೆ ನವೀಕೃತ ಸಂಖ್ಯೆ:ಸಿಎಂಸಿ:ಸಿಕೆಎಂಉಗ್ರಾಣ:ಎ9:ಸಿಆರ್:164:2009-10 ದಿನಾಂಕ:04-01-2010.ನೊಂದಾವಣೆಯ ಪತ್ರದ ನಕಲನ್ನು ಲಗತ್ತಿಸುವುದು. ಟೆಂಡರ್ ಫಾರಂ ಕೋರಿ ಕಛೇರಿಗೆ ಅರ್ಜಿ ಸಲ್ಲಿಸುವ ಹಾಗೂ ಕಛೇರಿಯಿಂದ ಖಾಲಿ ಟೆಂಡರ್ ಫಾರಂಗಳನ್ನು ಪಡೆಯುವ ದಿನಾಂಕ: 21.01.2010 ರಂದು ಸಂಜೆ 5.00 ಗಂಟೆವರೆಗೆ. ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಕಛೇರಿಗೆ ಸಲ್ಲಿಸುವ ದಿನಾಂಕ: 22.01.2010 ಸಂಜೆ 4.30 ಗಂಟೆವರೆಗೆ ಈ ಕೆಳಗೆ ಸಹಿ ಮಾಡಿರುವವರಿಗಾಗಲೀ ಅಥವಾ ಅವರಿಂದ ಅಧಿಕಾರ ಹೊಂದಿದವರಿಗಾಗಲೀ ಟೆಂಡರ್ ಸಲ್ಲಿಸತಕ್ಕದ್ದು. ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಬಂದ ಟೆಂಡರ್‌ಗಳನ್ನು ಸಾಧ್ಯವಾದಲ್ಲಿ ಇದೇ ದಿನಾಂಕ: 22.01.2010 ರಂದು ಸಂಜೆ 5.00 ಗಂಟೆಗೆ ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಟೆಂಡರ್ ತೆರೆ ಯಾವುದಾದರೂ ಸಾರ್ವತ್ರಿಕ ರಜೆ ಎಂದು ಘೋಷಿಸಲ್ಪಟ್ಟರೆ ಮರು ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. ಗುತ್ತಿಗೆದಾರರ ದರ್ಜೆ ಅಂದಾಜುಪಟ್ಟಿಗೆ ಅನುಗುಣವಾಗಿ.

| ಕ್ರ ಸಂ | ಕಾಮಗಾರಿ ಕೆಲಸಗಳ ವಿವರ | ಅಂದಾಜು ಮೊತ್ತ | ಠೇವಣಿ ಮೊತ್ತ | ಟೆಂಡರ್ ಫಾರಂ ಬೆಲೆ | ಕಾಲಾವಧಿ |
|---|---|---|---|---|---|
| 1 | ವಾರ್ಡ್ ನಂ 20 ರ ಸಂತೆ ಮೈದಾನದಲ್ಲಿರುವ ನಗರಸಭಾ ವಾಣಿಜ್ಯ ಮಳಿಗೆಗಳ ಹಿಂಭಾಗದಲ್ಲಿ 5 ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡುವುದು. | 1000000.00 | 25000.00 | 3000+ತೆರಿಗೆ | 3 ತಿಂಗಳು |
| 2 | ವಾರ್ಡ್ ನಂ 08 ರ ಗವನಹಳ್ಳಿ ಬಡಾವಣೆಯ ಬೀರುಗುಡಿ ದೇವಸ್ಥಾನದ ಪಕ್ಕದ ಜಾಗದಲ್ಲಿ ಪಾರ್ಕ್ ಅಭಿವೃದ್ಧಿ ಪಡಿಸುವುದು. | 100000.00 | 2500.00 | 300+ತೆರಿಗೆ | 1 ತಿಂಗಳು |

### ಷರತ್ತುಗಳು

1 ಕಾಮಗಾರಿ ಪೂರ್ಣಗೊಂಡ ನಂತರದ 2 ವರ್ಷಗಳವರೆಗೆ ಸದರಿ ಕಾಮಗಾರಿಗಳ ನಿರ್ವಹಣೆಯನ್ನು ಗುತ್ತಿಗೆದಾರರೇ ಮಾಡುವುದು.

2 ಇಎಂಡಿ ಮೊಬಲಗನ್ನು ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಅಥವಾ ನಗದು ಪಾವತಿಸಿದ ರಶೀದಿಯನ್ನು ಟೆಂಡರ್ ಜೊತೆ ಸಲ್ಲಿಸುವುದು. ಮತ್ತು ಅಂದಾಜು ದರಕ್ಕಿಂತ ಕಡಿಮೆ ದರದಲ್ಲಿ ಟೆಂಡರ್ ಸಲ್ಲಿಸಿದಲ್ಲಿ ಅಂದಾಜು ಮೊತ್ತದ ವ್ಯತ್ಯಾಸದ ಹಣವನ್ನು ಡಿ.ಡಿ. ಅಥವಾ ನಗದು ಪಾವತಿಸಿದ ರಶೀದಿಯನ್ನು ಟೆಂಡರ್ ಜೊತೆ ಸಲ್ಲಿಸುವುದು. ಇಎಂಡಿ ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

3 ದ್ವಿಪ್ರತಿಯಲ್ಲಿ ನೀಡಿರುವ ಷೆಡ್ಯೂಲ್ "ಬಿ"ಯಲ್ಲಿ ದರಗಳನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

4 ಟೆಂಡರ್ ನಿಭಂದನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಕಾಮಗಾರಿ / ಅಭಿಯಂತರರ ಶಾಖೆಯಲ್ಲಿ ಪಡೆದುಕೊಳ್ಳುವುದು.

5 ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಡಿರುತ್ತದೆ.

6 ನಗರಸಭಾ ಕಛೇರಿಯ ವೆಬ್‌ಸೈಟ್ WWW.ChikmagalurCity.gov.inರಲ್ಲಿ ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದೆ.

| | | |
|---|---|---|
| ಸಹಿ/- | ಸಹಿ/- | ಸಹಿ/- |
| (ಶ್ರೀ ಹೆಚ್.ಡಿ.ತಮ್ಮಯ್ಯ) | (ಶ್ರೀಮತಿ. ಕಸ್ತೂರಿ ಎಸ್ ಪವಾರ್) | (ಶ್ರೀ ವಿಹೆಚ್.ಕೃಷ್ಣಮೂರ್ತಿ, ಕೆ.ಎಂ.ಎ.ಎಸ್) |
| ಅಧ್ಯಕ್ಷರು, | ಉಪಾಧ್ಯಕ್ಷರು, | ಪೌರ ಆಯುಕ್ತರು, |
| ನಗರಸಭೆ, ಚಿಕ್ಕಮಗಳೂರು. | ನಗರಸಭೆ, ಚಿಕ್ಕಮಗಳೂರು. | ನಗರಸಭೆ, ಚಿಕ್ಕಮಗಳೂರು |